ರೂಪಾಯಿಗಳ ನಷ್ಟವನ್ನು ಅನುಭವಿಸಿರುವುದು ನಿಜವೇ?

ಆ) "ಗಾಲಾ" ಪಾನೀಯದ ಜಾಹೀರಾತಿಗಾಗಿ 18 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ನಿಗಧಿತ ಅವಧಿಯೊಳಗೆ ಮಾರಾಟ ಮಾಡಲು ಸಾಧ್ಯವಾಗದೇ 60 ಲಕ್ಷ ರೂಪಾಯಿ ಬೆಲೆಯ ಪಾನೀಯವನ್ನು ನಿಗಮ ನಾಶಗೊಳಿಸಿರುವುದು ನಿಜವೇ?

ಇ) "ಗಾಲಾ" ಪಾನೀಯದ ಮಾರಾಟವೂ ಸೇರಿದಂತೆ ನಿಗಮದ ಹಣ್ಣು ಸಂಸ್ಕರಣ, ಇಂಜಿನಿಯರಿಂಗ್ ವಿಭಾಗ ಹಾಗೂ ಇತರೆ ವಿಭಾಗಗಳಲ್ಲಿ ಭಾರಿ ಪ್ರಮಾಣದ ಅವ್ಯವಹಾರ ನಡೆದಿರುವುದು ನಿಜವೇ;

ಈ) ಈ ಅವ್ಯವಹಾರದ ಬಗ್ಗೆ ಸರ್ಕಾರದ ಕೃಷಿ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ;

ಉ) ಹಾಗಿದ್ದಲ್ಲಿ, ಈ ವರದಿಯ ಆಧಾರದ ಮೇಲೆ ಸರ್ಕಾರ ರಾಜ್ಯ ಕೃಷಿ ಕೈಗಾರಿಕಾ ನಿಗಮದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) 1975-76 ರಿಂದ 1990ರ ವರೆವಿಗೆ ರಾಜ್ಯ ಕೃಷಿ ಕೈಗಾರಿಕಾ ನಿಗಮವು ಒಟ್ಟು 972.48 ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸಿದೆ.

ಆ) 1986-87 ರಿಂದ ಮಾರ್ಚ್ 1991ರ ಅವಧಿಯಲ್ಲಿ ಗಾಲ ಜಾಹಿರಾತಿಗಾಗಿ ಒಟ್ಟು 59 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ನಿಗಮದ ಆಡಳಿತ ಮಂಡಲಿ ಅವಧಿ ಮೀರಿದ 7.43 ಲಕ್ಷ ರೂ.ಗಳ ಬೆಲೆಬಾಳುವ ಗಾಲ ಪಾನೀಯದ ದಾಸ್ತಾನನ್ನು ಮನ್ನಾ ಮಾಡಲು ನಿರ್ಧರಿಸಿತು. ಇನ್ನೂ 3.91 ಲಕ್ಷ ರೂ.ಗಳ ಬೆಲೆಬಾಳುವ ಗಾಲ ಪಾನೀಯದ ದಾಸ್ತಾನು ಅವಧಿ ಮೀರಿರುವ ಕಾರಣದಿಂದ ಹಾಗೆಯೇ ಉಳಿದಿದ್ದು, ಅದನ್ನು ಮನ್ನಾ ಮಾಡಲು ಆಡಳಿತ ಮಂಡಳಿ ನಿರ್ಧರಿಸಬೇಕಾಗಿದೆ.

ಇ) ಕೃಷಿ ಕೈಗಾರಿಕಾ ನಿಗಮದ ಎಲ್ಲಾ ವಿಭಾಗಗಳಲ್ಲಿ ಅವ್ಯವಹಾರ ನಡೆದಿರುವುದು ಕಂಡು ಬಂದ ತಕ್ಷಣವೇ ಸಂಬಂಧಪಟ್ಟವರ ಮೇಲೆ ಸೇವಾ ನಿಯಮದ ಪ್ರಕಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗಿದೆ.

ಈ) ಸಮಿತಿ ರಚಿಸಿಲ್ಲ. ಕಾರ್ಯದರ್ಶಿಗಳನ್ನು ಸಂಬಂಧಿತ ವಿಷಯದ ಮೇಲೆ ಪರಿಶೀಲಿಸಿ ವರದಿ ನೀಡಲು ತಿಳಿಸಲಾಗಿದೆ.

ಉ) ಪರಿಶೀಲನಾ ಹಂತದಲ್ಲಿದ್ದು, ಇನ್ನೂ ವರದಿ ಕಾರ್ಯದರ್ಶಿಗಳಿಂದ ಬಂದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೆ ದಿನಾಂಕ 7.3.91ರ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರಿನಲ್ಲಿ ತರಕಾರಿಗಳಿಗೆ ಸರಿಯಾದ ಬೆಲೆ ದೊರೆಯದಿರುವುದು

18 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ರೈತರು ಬೆಳೆದ ತರಕಾರಿಗಳಿಗೆ ಬೆಂಗಳೂರು ನಗರದಲ್ಲಿ ಸರಿಯಾದ ಬೆಲೆಗಳು ದೊರೆಯದೆ ಇದ್ದುದರಿಂದ ಇವುಗಳನ್ನು ಪಕ್ಕದ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಕಳುಹಿಸಿ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರೈತರಿಗೆ ನ್ಯಾಯ ಬೆಲೆ ಸಿಗುವಂತೆ ಮಾಡಲು

ಸರ್ಕಾರದವರ ಮುಂದೆ ಯೋಜನೆ ಏನಾದರೂ ಇದೆಯೇ?

ಇ) ಹಾಗಿದ್ದಲ್ಲಿ, ಅಂತಹ ಯೋಜನೆಗಳಾವುವು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಬಂದಿದೆ. ಬೆಂಗಳೂರಿನಲ್ಲಿ ಸದರಿಯಾದ ಬೆಲೆ ಸಿಗದಿದ್ದಕ್ಕೆ ಈ ರೀತಿ ಕಳುಹಿಸುತ್ತಿಲ್ಲ, ಆದರೆ ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ಬೇಡಿಕೆಗೆ ಅನುಗುಣವಾಗಿ ಕಳಿಸಲಾಗುತ್ತದೆ.

ಆ) ಇದೆ. ಹೆಚ್ಚಿನ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವ ಮೂಲಕ.

ಇ) ಬೆಂಗಳೂರು ಜಿಲ್ಲೆಯಲ್ಲಿ, ತೋಟ ಬೆಳೆಗಾರರ ಸಹಕಾರ ಮಾರಾಟ ಮತ್ತು ಸಂಸ್ಕರಣಾ ಸಂಘವು 2 ಹಣ್ಣು ಮತ್ತು ತರಕಾರಿ ಸಂಗ್ರಹಣಾ ಕೇಂದ್ರವನ್ನು ತೆಗೆದಿದ್ದು, ಈ ಸಂಗ್ರಹಣಾ ಕೇಂದ್ರಗಳಿಂದ ಸಂಗ್ರಹಿಸಿದ ಮತ್ತು ಕೋಲಾರದ ಬೆಳೆಗಾರರಿಂದ ಸಂಗ್ರಹಿಸಿದ ಹಣ್ಣು ಮತ್ತು ತರಕಾರಿಗಳನ್ನು ಬೆಂಗಳೂರು ನಗರದ ಮತ್ತು ಕೋಲಾರ ಕೆ.ಜಿ.ಎಫ್‌ಗಳಲ್ಲಿ ತೆರೆದಿರುವ 117 ಮಾರಾಟ ಮಳಿಗೆಗಳ ಮೂಲಕ ನ್ಯಾಯ ಬೆಲೆಗೆ ಗ್ರಾಹಕರಿಗೆ ಒದಗಿಸಲಾಗುತ್ತದೆ. ಈ ಜಿಲ್ಲೆಗಳಲ್ಲಿ ಹೆಚ್ಚಿಗೆ ಬೆಳೆಯುವ ಹಣ್ಣು ಮತ್ತು ತರಕಾರಿಗಳನ್ನು ಹೊರ ರಾಜ್ಯಗಳಿಗೂ ಸಹ ಕಳುಹಿಸಿ ಕೊಡಲಾಗುತ್ತಿದೆ.

ಈ ಜಿಲ್ಲೆಗಳಲ್ಲಿ ಸಂಘದ ಕಾರ್ಯ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸಲು ಮತ್ತು ಇನ್ನಷ್ಟು ಬಲಗೊಳಿಸಲು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದವರು 348.90 ಲಕ್ಷ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿದೆ.

ರಾಜ್ಯದಲ್ಲಿ ಹಸಿರು ಕ್ರಾಂತಿ

48 - ಶ್ರೀ ಜಿ. ರಾಜುಗೌಡ (ಹನೂರು): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಸಿರು ಕ್ರಾಂತಿ ಯಾವ ಯಾವ ಬೆಳೆಗಳ ವಾರ್ಷಿಕ ಉತ್ಪಾದನೆ ಮೇಲೆ ಪ್ರಭಾವ ಬೀರಿದೆ?

ಆ) ಅನಾವೃಷ್ಟಿಯನ್ನು ತಡೆದುಕೊಂಡು ಫಸಲನ್ನು ಕೊಡಬಲ್ಲ ಖುಷ್ಕಿ ಬೆಳೆಗಳ ತಳಿಗಳನ್ನು ಕಂಡು ಹಿಡಿಯಲು ಸಂಶೋಧನಾಲಯದಲ್ಲಿ ಪ್ರಯೋಗವನ್ನೇನಾದರೂ ಮಾಡಲಾಗಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ರಾಜ್ಯದಲ್ಲಿ ಹಸಿರು ಕ್ರಾಂತಿಯು ಬಹುತೇಕ ವಿಕದಳ ಧಾನ್ಯಗಳ ಉತ್ಪನ್ನದ ಮೇಲೆ ಮುಖ್ಯವಾಗಿ ಗೋಧಿ, ರಾಗಿ, ಭತ್ತ, ಜೋಳ ಮತ್ತು ಮುಸುಕಿನ ಜೋಳ ಬೆಳೆಗಳ ಉತ್ಪಾದನೆಯಲ್ಲಿ ಪ್ರಭಾವ ಬೀರಿದೆ.

ಆ) ಅನಾವೃಷ್ಟಿಯನ್ನು ತಡೆದುಕೊಂಡು ಫಸಲನ್ನು ಕೊಡಬಲ್ಲ ಖುಷ್ಕಿ ಬೆಳೆಗಳ ತಳಿಯನ್ನು ಕಂಡು ಹಿಡಿಸಲು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಾಕಷ್ಟು ಪ್ರಯೋಗಗಳು ನಡೆದಿದ್ದು ವಿವಿಧ ಬೆಳೆಗಳ ತಳಿಗಳನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ಎಣ್ಣೆ ಬೀಜಗಳ ಕೊರತೆ

49 - ಶ್ರೀ ಜಿ. ರಾಜುಗೌಡ (ಹನೂರು): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಎಣ್ಣೆಕಾಳಿನ ಕೊರತೆಯನ್ನು ನೀಗಲು ಸರ್ಕಾರದವರು ಕ್ರಮ ಕೊಂಡಿರುವ ಕಾರ್ಯಕ್ರಮಗಳೇನು?

2) ತಾಳೆ ಮರ ಬೆಳೆವಣಿಗೆಗೆ ಎಲ್ಲಿ ಎಷ್ಟು ಹೆಕ್ಟೇರು ಪ್ರದೇಶವನ್ನು ಗೊತ್ತು ಮಾಡಿಸಲಾಗಿದೆ?, (ಈ ಯೋಜನೆಯ ವಿವರವನ್ನು ತಿಳಿಸುವುದು)